

ಚಿತ್ರ: ವಿಶ್ವನಾಥ ಸುವರ್ಣ

ಪ್ರವಾಸೋದ್ಯಮದ ಒಂದು ಆಕರ್ಷಣೆಯನ್ನಾಗಿ ಕೂಡಾ ಮಾಡಿಕೊಂಡಿವೆ. ಚಿಕ್ಕ ವಯಸ್ಸಿನಲ್ಲೆ ಈ ವೃತ್ತಿಗೆ ದೂಡುವುದರಿಂದ ಅನೇಕ ರೋಗಗಳು ಹಾಗೂ ಕಾಯಿಲೆಗಳಿಗೆ ಈ ಮಕ್ಕಳು ಬಲು ಬೇಗ ಬಲಿಯಾಗುತ್ತಾರೆ.

ಈ ಲೈಂಗಿಕ ಶೋಷಣೆಯಲ್ಲಿ ಇತ್ತೀಚೆಗೆ ಅತ್ಯಂತ ಹೆಚ್ಚಿಗೆ ಬೆಳೆಯುತ್ತಿರುವ ಅಪಾಯಕಾರಿ ಬೆಳವಣಿಗೆ ಎಂದರೆ ಮದುವೆಗಾಗಿ ಹೆಣ್ಣನ್ನು ಅಪಹರಿಸುವುದು. ನಮ್ಮ ದೇಶದಲ್ಲಿ ಮನೆ ಮಾಡಿರುವ ವರದಕ್ಷಿಣೆಯಂತಹ ಹೀನ ಪದ್ಧತಿಗಳ ಹಿನ್ನೆಲೆಯಲ್ಲಿ ಅನೇಕ ರಾಜ್ಯಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಹಾಗೂ ಶಿಶುಹತ್ಯೆಗಳಾಗುವುದು ಸಾಮಾನ್ಯ. ಇದರಿಂದಾಗಿ ಅಂತಹ ರಾಜ್ಯಗಳಲ್ಲಿ ಗಂಡು ಹಾಗೂ ಹೆಣ್ಣಿನ ಅನುಪಾತದ ಪ್ರಮಾಣ ಗಣನೀಯವಾಗಿ ಕುಸಿದಿದ್ದು ಅಲ್ಲಿ ವಯಸ್ಸಿಗೆ ಬಂದ ಗಂಡಸರಿಗೆ ಮದುವೆಯಾಗಲು ಹೆಣ್ಣುಗಳೇ ಸಿಗುತ್ತಿಲ್ಲ. ಅಂತಹ ಜನ ದೇಶದ ವಿವಿಧ ಭಾಗಗಳಿಂದ ಅಪಹರಿಸಿ ತಂದ ಮಕ್ಕಳನ್ನು ಮದುವೆಗಾಗಿ ಖರೀದಿಸುತ್ತಾರೆ. ಹಾಗೆ ಖರೀದಿಸಿದ ಹೆಣ್ಣಿಗೆ ಹೆಂಡತಿಯ ಸ್ಥಾನಮಾನ ಎಂದೂ ಸಿಗುವುದಿಲ್ಲ. ಜೀತದ ಆಳಿನಂತೆ ನೋಡಿಕೊಳ್ಳಲಾಗುತ್ತದೆ. ಖರೀದಿಸಿದ ಮನೆಯ ಎಲ್ಲ ಗಂಡಸರೂ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುವುದು ಸಾಮಾನ್ಯ. ಹೆಣ್ಣುಮಕ್ಕಳ ಶೋಷಣೆಯ ಈ ಕರಾಳ ಮುಖದ ಕೆಲವು ಪ್ರಕರಣಗಳನ್ನು ಗಮನಿಸಿದರೆ ಎಂತಹವರ ಕರುಳೂ ಕಿತ್ತುಬರುವಂತಾಗುತ್ತದೆ.

ಇದು ಪ್ರೇಮಯುಗ. ಈಗಷ್ಟೇ 12 ದಾಟಿದ ಎಳೆಯರೂ ಪ್ರೀತಿ ಪ್ರೇಮದ ಜಾಲದಲ್ಲಿ ಸಿಕ್ಕುಬೀಳುವುದು ನೋಡಿದರೆ ಗಾಬರಿಯಾಗುತ್ತದೆ. ಕಳೆದ ವಾರಷ್ಟೇ ಬೆಂಗಳೂರಿನಲ್ಲಿ ಹೈಸ್ಕೂಲ್ ಹುಡುಗರ ಎರಡು ಗುಂಪುಗಳ ಮಧ್ಯೆ ಮಾರಾಮಾರಿಯಾಗಿ ಒಬ್ಬ ಹುಡುಗ ಚೂರು ತಿವಿತದಿಂದ ಪ್ರಾಣಬಿಟ್ಟ. ಈ ಘಟನೆಗೆ ಕಾರಣವಾದದ್ದು ಆತ ಹುಡುಗಿಯೊಬ್ಬಳನ್ನು ಪ್ರೀತಿಯಿಂದ ಮಾತನಾಡಿಸಿದ ಎಂಬ ತಪ್ಪು ಕಲ್ಪನೆ. 14–15ರ ಹರೆಯದ ಹುಡುಗರು ಜೈಲು ಕಂಬಿಯ ಹಿಂದೆ ಜೀವನ ದೂಡುವುದನ್ನು ಕಲ್ಪಿಸಿಕೊಳ್ಳುವುದೇ ಕಷ್ಟ.

ಪ್ರೀತಿ– ಪ್ರೇಮದ ಹೆಸರಿನಲ್ಲಿ ಮೋಸ ಮಾಡಿ ಹೆಣ್ಣುಮಕ್ಕಳನ್ನು ಕರೆತಂದು ವೇಶ್ಯಾವೃತ್ತಿಗೆ ಮಾರಿ ಹೋಗುವುದು ಒಂದೆಡೆಯಾದರೆ ಬಡಮಕ್ಕಳನ್ನು